ತಪ್ಪಿಸಿಬಿಡುತ್ತಿದ್ದ. ಹೀಗೆ ಯಾಕೆ ಮಾಡಿದೆ ಎಂದು ಧರ್ಮರಾಯ ಒಂದು ಸಾರಿಯೂ ಕೇಳುತ್ತಿರಲಿಲ್ಲ. ಅವನು ಬಯಸಿದ್ದನ್ನೆಲ್ಲ ಮಾಡಿಕೊಡುವುದಕ್ಕೆ ಊಟ ಉಪಚಾರದವರ ದಂಡನ್ನೇ ನೇಮಿಸಿದ್ದ. ಅತ್ಯುತ್ತಮವಾದ ಬಟ್ಟೆಗಳು, ಬಗೆಬಗೆಯ ಹಾರಗಳು ಪಾಂಡವರ ಕಡೆಯಿಂದ ದಿನಾ ಸರಬರಾಜಾಗುತ್ತಿತ್ತು. ಮಸಾಲೆ ಹಾಕಿದ ಮಾಂಸ, ಲಘುವಾದ ಪಾನಕ ಹಿಂದಿನ ಹಾಗೆಯೇ ಬಗೆಬಗೆಯ ತಿಂಡಿಗಳು ಇವೆಲ್ಲಾ ಒಂದು ದಿನವೂ ತಪ್ಪುತ್ತಿರಲಿಲ್ಲ. ಯಾತ್ರೆಗೆ, ವಿಹಾರಕ್ಕೆ ಎಂದು ಅವನು ಹೊರಟರೆ ಮೊದಲೇ ಅದಕ್ಕೆ ಬೇಕಾದದ್ದನ್ನೆಲ್ಲ ಧರ್ಮರಾಯ ಸಿದ್ಧಪಡಿಸಿಬಿಡುತ್ತಿದ್ದ. ಹಿಂದಿನ ಹಾಗೇ ಈಗಲೂ ರಾಜಾನುರಾಜರೆಲ್ಲ ಬರುತ್ತಿದ್ದರು ಇವನ ಬಳಿ ಕೂತು ಮಾತಾಡುತ್ತಿದ್ದರು.

ಕುಂತೀ, ದ್ರೌಪದೀ, ಸಾತ್ವತೀ, ಉಲೂಪೀ, ದೇವೀ ಚಿತ್ರಾಂಗದೆ, ಆ ಧೃಷ್ಟಕೇತುವಿನ ತಂಗಿ, ಜರಾಸಂಧನ ಮಗಳು ಇನ್ನೂ ಬೇಕಾದಷ್ಟು ಜನ ಅಂತಃಪುರದ ಹೆಂಗಸರು, ಸುಬಲನ ಮಗಳು ಗಾಂಧಾರಿಯ ನೌಕರಾನಿಯರಾಗೇ ಇರುತ್ತಿದ್ದರು. ಮಕ್ಕಳು ಹೋದ ದುಃಖ ಅವರಿಗೆ ಒಂದಿಷ್ಟೂ ಆಗಬಾರದು ಎಂದು ಯುಧಿಷ್ಠಿರ ತಮ್ಮಂದಿರಿಗೆ ದಿನಾ ಎಚ್ಚರಿಕೆ ಹೇಳುತ್ತಿದ್ದ. ತಮ್ಮಂದಿರು ಧರ್ಮರಾಜನ ಮಾತು ಕೇಳಿ ಸ್ವಲ್ಪ ಹೆಚ್ಚಾಗೇ ಎಚ್ಚರಿಕೆ ಮಾಡುತ್ತಿದ್ದರು, ಭೀಮನೊಬ್ಬನ ಹೊರತು. ಧೃತರಾಷ್ಟ್ರನ ದುರ್ಬುದ್ಧಿಯಿಂದಲೇ ಜೂಜು ನಡೆದದ್ದು ಎಂಬ ಸಂಗತಿ ಭೀಮನ ಹೃದಯದಲ್ಲಿ ಬಲವಾಗಿ ಅಂಟಿಕೊಂಡುಬಿಟ್ಟಿತ್ತು.

ಗಾಂಧಾರಿಗೂ ಪುತ್ರಶೋಕ ಕಡಿಮೆಯಾಗಿ ತನ್ನ ನಿಜವಾದ ಮಕ್ಕಳು ಇವರು ಅನ್ನುವಷ್ಟು ಅಕ್ಕರೆ ಮೂಡಿತ್ತು. ಧೃತರಾಷ್ಟ್ರನಿಗೆ ಎಲ್ಲರೂ ವಿನೀತರಾಗಿದ್ದರು. ಅವನಿಗೆ ಇಷ್ಟವಲ್ಲದ್ದು ಏನೂ ಅಲ್ಲಿ ನಡೆಯುತ್ತಿರಲಿಲ್ಲ. ಧೃತರಾಷ್ಟ್ರ ದಿನಾ ಬೆಳಗ್ಗೆ ಎದ್ದು ಜಪ ಮಾಡಿಯಾದ ಮೇಲೆ 'ಪಾಂಡವರು ಯಾವತ್ತೂ ಸೋಲದೆ ಇರಲಿ' ಎಂದು ಹಾರೈಸುತ್ತಿದ್ದ. ಧರ್ಮರಾಯನೂ ಅಷ್ಟೇ. ಯಾವನೇ ಆಗಲಿ ಧೃತರಾಷ್ಟ್ರನಿಗೆ ಅಪ್ರಿಯವಾದದ್ದನ್ನು ಮಾಡಿದರೆ ಅವನು ಯುಧಿಷ್ಠಿರನ ಕೋಪಕ್ಕೆ ಪಾತ್ರನಾಗುತ್ತಾನೆ ಎನ್ನುವಷ್ಟರ ಮಟ್ಟಿಗೆ ಆಗಿಬಿಟ್ಟಿತ್ತು. ಧೃತರಾಷ್ಟ್ರನಿಗೆ ದುರ್ಯೋಧನನು ಮಾಡಿದ ಕೆಟ್ಟ ಕೆಲಸವನ್ನು ತಪ್ಪಿಯೂ ಯಾರೂ ನೆನೆಸುತ್ತಾ ಇರಲಿಲ್ಲ. ಯುಧಿಷ್ಠಿರನ ಆಜ್ಞೆಯ ಭಯ ಹಾಗಿತ್ತು. ಅಜಾತಶತ್ರು ಯುಧಿಷ್ಠಿರನ ಈ ತಿಳಿಯಾದ ಮನವನ್ನು ಕಂಡು ಧೃತರಾಷ್ಟ್ರ ಗಾಂಧಾರಿಯರು ಹರ್ಷವಾಗೇ ಇದ್ದರು. ಭೀಮನೂ ಸಹ ಧರ್ಮರಾಯನ ಮಾತನ್ನೇ ಕೇಳುತ್ತಿದ್ದ. ಆದರೆ ಧೃತರಾಷ್ಟ್ರನ ಹತ್ತಿರ ಬಂದರೆ ಮನಸ್ಸು ಕೆಡುತ್ತಿತ್ತು.

ನೋಡುವವರಿಗೆ ದುರ್ಯೋಧನನ ಅಪ್ಪನಲ್ಲೂ ಯುಧಿಷ್ಠಿರನಲ್ಲೂ ಪರಸ್ಪರ ಪ್ರೀತಿಯ ವಿನಾ ಬೇರೇನೂ ಕಾಣುತ್ತಲೇ ಇರಲಿಲ್ಲ. ಆದರೆ ಕೌರವನ ನೆನಪು ಬಂದೊಡನೆ ಧೃತರಾಷ್ಟ್ರನ ಬುದ್ಧಿ ಕಹಿ ಆಗುತ್ತಿತ್ತು. ಆಗ ಭೀಮನಿಗೆ ಕೇಡು ಬಯಸುತ್ತಿದ್ದ. ಭೀಮನೂ ಅಷ್ಟೇ. ಜನಾಧಿಪ



ಧೃತರಾಷ್ಟ್ರನ ಬಗ್ಗೆ ಒಳಗೇ ಕೋಪ ಮಸೆಯುತ್ತಿತ್ತು. ಗುಟ್ಟಾಗಿ ಅವನಿಗಿಷ್ಟವಿಲ್ಲದ್ದನ್ನೇ ಮಾಡುತ್ತಿದ್ದ. ಒಂದೊಂದು ಸಾರಿ ಧೃತರಾಷ್ಟ್ರನ ಮೋಸವೋ ಇನ್ನೇನೋ ನೆನಪಿಗೆ ಬಂದುಬಿಡುತ್ತಿತ್ತು. ಆವಾಗ ಗೆಳೆಯರ ನಡುವೆ ಜೋರಾಗಿ ತೋಳು ಬಡಿದು ಸದ್ದು ಮಾಡುತ್ತಿದ್ದ. 'ಕುರುಡನ ಮಕ್ಕಳನ್ನು ಈ ತೋಳಿನಿಂದಲೇ ಪರಲೋಕಕ್ಕೆ ಕಳಿಸಿದ್ದು. ಅವರೇನು ಸಾಮಾನ್ಯರಾ ಎಲ್ಲಾ ಶಸ್ತ್ರಾಸ್ತ್ರವನ್ನೂ ತಿಳಿದವರು. ಆದರೆ ಈ ನನ್ನೆರಡು ತೋಳಿಗೆ ಸಿಕ್ಕಿ ಧೃತರಾಷ್ಟ್ರನ ಮಕ್ಕಳೆಲ್ಲಾ ನಾಶವಾಗಿ ಹೋದರು. ಇವತ್ತು ಈ ತೋಳು ಚಂದನ ಪೂಸಿಕೊಂಡು ಹೇಗಿವೆ ಹ್ಞಾ. ಇದರಿಂದಲೇ ದುರ್ಯೋಧನ ತನ್ನ ಬಂಧು ಬಳಗದ ಸಮೇತ ನಾಶವಾಗಿದ್ದು' ಈ ಥರ ಮಾತಿನ ಈಟಿಗಳು ಒಂದೇ ಎರಡೆ!

ಆ ಭೀಮನ ಸಲಾಕೆಯ ಮಾತು ಕಿವಿಗೆ ಬಿದ್ದು ಅವನು ನೊಂದುಕೊಳ್ಳುತ್ತಿದ್ದ. ಕಾಲದ ಹೊರಳಾಟ ಬಲ್ಲವಳು, ಯಾವುದರ ಸ್ವಭಾವ ಏನೇನು ಎಂದು ತಿಳಿದವಳು, ಅಂತಹ ಗಾಂಧಾರಿಗೂ ಕೇಳಿಸುತ್ತಿತ್ತು. ಭೀಮನ ಮಾತಿನ ಬಾಣದ ನೋವು ತಿನ್ನುತ್ತಿದ್ದರೂ ಇದರ ವಿಚಾರ ಯುಧಿಷ್ಠಿರನಿಗೂ ಹೇಳದೆ, ಅರ್ಜುನನಿಗೂ ಹೇಳದೆ, ದ್ರೌಪದಿಗೂ ಗೊತ್ತುಮಾಡಲಿಲ್ಲ. ಹೀಗೇ ಹದಿನೈದು ವರ್ಷ ಕಳೆದರು. ದುಃಖ ತುಂಬಿ ಬಂತು. ಇನ್ನು ತಡೆಯಲಾಗಲಿಲ್ಲ. ಧೃತರಾಷ್ಟ್ರ ಬಳಗದವರನ್ನೆಲ್ಲಾ ಕರೆದ. ಕಣ್ಣೀರು ಹಾಕಿಕೊಂಡು ಹೀಗೆಂದ

'ನಿಮಗೆಲ್ಲಾ ನನ್ನ ವಂಶ ನಾಶವಾದದ್ದು ಗೊತ್ತು. ನನ್ನಿಂದಲೇ, ನನ್ನ ಮಕ್ಕಳೆಲ್ಲ ನಾಶ ಆದದ್ದು. ನನ್ನ ಮಗ ಬುದ್ಧಿಗೇಡಿ, ದಾಯಾದಿಗಳಲ್ಲಿ ಭಯ ಹುಟ್ಟಿಸುವವನು. ತಿಳಿದೂ ಅಂಥವನನ್ನು ರಾಜ ಮಾಡಿದ್ದು ನಿಮಗೆಲ್ಲಾ ಗೊತ್ತೇ ಇದೆ.

ಭಗವಂತ ವಾಸುದೇವ ಎಷ್ಟೆಲ್ಲ ಹೇಳಿದ. ಅವನ ಮಾತಲ್ಲಿ ಎಷ್ಟೆಲ್ಲ ಹುರುಳಿತ್ತು. ನಾನು ಕೇಳಲಿಲ್ಲ. ಮಗನ ಮೇಲಿನ ಅಕ್ಕರೆಗೆ ತಿಳಿದವರ ಮಾತನ್ನ ದೂರ ಮಾಡಿದೆ. ನನ್ನ ಮಗ, ಮತ್ತವನ ಪರಿವಾರ ಸಮೇತದ ಸಾವಿಗೆ ಒಂದು ರೀತಿ ನಾನೂ ಕಾರಣನಾಗಿಬಿಟ್ಟೆ. ವಿದುರ, ಭೀಷ್ಮ, ಕೃಪ, ವ್ಯಾಸ ಎಲ್ಲರೂ ಪದೇ ಪದೇ ಎಚ್ಚರಿಸಿದರು. ಮಹಾತ್ಮರು ಅವರು. ಈ ಸಂಜಯ, ಗಾಂಧಾರಿ ಕೂಡ ಎಷ್ಟು ಸಾರಿ ಹೇಳಿದರು.

ಈಗ ಒದ್ದಾಡುತಿದೀನಿ.

ಪಾಂಡುಪುತ್ರರು ಗುಣವಂತರು. ಅವರಿಗೆ ತಾತ ಮುತ್ತಾತಂದಿರ ಸಂಪತ್ತನ್ನಾದರೂ ಕೊಡಬೇಕಿತ್ತು, ಕೊಡಲಿಲ್ಲ. ಕೃಷ್ಣ ಎಲ್ಲರ ವಿನಾಶ ಕಂಡು ಮೊದಲೇ ಎಚ್ಚರಿಸಿದ್ದ. ಆಗಲೂ ಅವನ ಮಾತು ಕೇಳಲಿಲ್ಲ. ನನ್ನ ತಪ್ಪು ಒಂದೇ, ಎರಡೇ. ಅವನ್ನೆಲ್ಲ ಮರೆಯಲು ನನ್ನ ಕೈಲಿ ಆಗುತ್ತಲೇ ಇಲ್ಲ.

ನನ್ನನ್ನು ನಾನು ಶುದ್ಧ ಮಾಡಿಕೊಳ್ಳುವುದಕ್ಕೆ ಎಂದು ವ್ರತ ಮಾಡುತ್ತಾ ಇದೀನಿ. ನಾಲ್ಕು ಹೊತ್ತು ಬಿಟ್ಟು, ಕೆಲವು ಸಾರಿ ಎಂಟೂ ಹೊತ್ತು ಬಿಟ್ಟು, ಒಂದೊಂದು ಸಾರಿ ಹಸಿವು ಬಾಯಾರಿಕೆಗೆ ಅಂತ ಒಂದಿಷ್ಟು ತಿನ್ನುತ್ತೇನೆ. ಗಾಂಧಾರಿಯೂ ಹಾಗೇನೆ ಮಾಡುತ್ತಾಳೆ. ನನ್ನ ಪರಿವಾರದವರಿಗೆ ಇದರ ಸುಳಿವೇ ಸಿಕ್ಕಿಲ್ಲ.

ಯುಧಿಷ್ಠಿರನಿಗೆ ನಮ್ಮ ಯೋಗಕ್ಷೇಮದ್ದೇ ಚಿಂತೆ. ಅವನ ಹೆದರಿಕೆಗೆ ಉಳಿದವರಿಗೂ ನಂಟರಿಗೂ ನನ್ನದೇ ಚಿಂತೆ. ನೆಲದ ಮೇಲೆ ದರ್ಭೆ ಕೃಷ್ಣಾಜಿನ ಹಾಸಿಕೊಂಡು ಮಲಗುತೇವೆ. ಕೇಳಿದರೆ ವ್ರತದಲ್ಲಿದೇವೆ ಎನ್ನುತ್ತೇವೆ. ನನ್ನ ನೂರು ಮಕ್ಕಳು ಯುದ್ಧದಲ್ಲಿ ಪಲಾಯನ ಮಾಡದೆ ಸತ್ತಿದಾರೆ. ಅವರ ಬಗ್ಗೆ ನನಗೆ ಸಂಕಟ ಇಲ್ಲ' ಎನ್ನುತ್ತಾ ಧರ್ಮರಾಯನನ್ನು ನೋಡಿ—

'ಯಾದವಿಯ ಮಗೂ, ನಿನಗೆ ಒಳ್ಳೆಯದಾಗಲಿ. ನನ್ನ ಮಾತು ಕೇಳು. ನಿನ್ನ ಪಾಲನೆಯಲ್ಲಿ ಸುಖವಾಗಿದೀವಿ. ವರ್ಷವರ್ಷವೂ ಮಕ್ಕಳಿಗೆ ಮತ್ತೆ ಮತ್ತೆ ತಿಥಿ ಮಾಡಿ ಕೈ ತುಂಬಾ ದಾನ ಮಾಡಿದೇನೆ. ಪುತ್ರ ಪುಣ್ಯ, ಅವನ ಬಲ, ಎಲ್ಲವನ್ನೂ ಕಳಕೊಂಡ ಸಂಕಟದಲ್ಲೂ ಮಕ್ಕಳ ಸಾವನ್ನು ಕಾಣದ ಹಾಗೆ ಈ ಗಾಂಧಾರಿ ನನ್ನನ್ನು ನೋಡಿಕೊಂಡಿದಾಳೆ. ದ್ರೌಪದಿಗೆ ಅವಮಾನ ಮಾಡಿ, ನಿನ್ನ ಐಶ್ವರ್ಯ ಕಸಿದುಕೊಂಡು ಸತ್ತರು. ಅವರ ವಿಷಯಕ್ಕೆ ನಾನು ಮಾಡಬೇಕಾದ್ದು ಏನೂ ಇಲ್ಲ. ನಿನ್ನ ಕೈಲಿ ಸತ್ತ ಅವರು ಶಸ್ತ್ರದವರು ಸೇರುವ ಲೋಕವನ್ನು ತಲುಪುತ್ತಾರೆ. ಈಗ ನಮ್ಮ ಪುಣ್ಯ ನಾವು ಸಂಪಾದಿಸಿಕೊಳ್ಳಬೇಕಾಗಿದೆ. ನನಗೆ, ಗಾಂಧಾರಿಗೆ ಅಪ್ಪಣೆ ಕೊಡು. ನೀನು ವೀರ. ಧರ್ಮವನ್ನು ಕಾಪಾಡುವವನು. ರಾಜ, ಗುರು. ನಮ್ಮನ್ನು ಸಾಕಿದ್ದೀಯ. ಆದ್ದರಿಂದ ನಿನಗೆ ಹೇಳುತ್ತಾ ಇದ್ದೇನೆ. ನಾವಿನ್ನು ಕಾಡಿನ ಆಸರೆ ಪಡಕೋತೇವೆ. ಅಪ್ಪಣೆ ಕೊಡಪ್ಪಾ ವೀರಾ. ನಾರು ಬಟ್ಟೆ ಉಟ್ಟುಕೊಂಡು ನಾನೂ ಗಾಂಧಾರಿಯೂ ಶುಭ ಹಾರೈಸುತ್ತಾ ಕಾಡಿನಲ್ಲಿ ಇದ್ದುಬಿಡುತ್ತೇವೆ.

ಕೊನೆಗಾಲದಲ್ಲಿ ಎಲ್ಲವನ್ನೂ ಮಕ್ಕಳಿಗೆ ಬಿಟ್ಟು ಕಾಡಿಗೆ ಹೋಗುವುದು ನಮ್ಮ ವಂಶದವರ ರೀತಿ. ಅಲ್ಲಿ ಗಾಳಿ ಕುಡಿದುಕೊಂಡೋ ಉಪವಾಸ ಇದ್ದೋ ನನ್ನ ಹೆಂಡತಿಯ ಜತೆ ಇದ್ದುಕೊಂಡು ತಪಸ್ಸು ಮಾಡಬೇಕು. ಆ ತಪಸ್ಸಿನಲ್ಲಿ ನಿನಗೂ ಪಾಲಿದ್ದೇ ಇರುತ್ತದೆ. ಪ್ರಜೆ ಮಾಡುವ ಕೆಲಸದಲ್ಲಿ ಒಳ್ಳೆದಿರಲಿ ಕೆಟ್ಟದಿರಲಿ ಎಲ್ಲದರಲ್ಲೂ ರಾಜನಿಗೆ ಪಾಲಿರುತ್ತದೆ, ಅಪ್ಪಣೆ ಕೊಡಪ್ಪ ರಾಜಾ.

(ಸಶೇಷ)